said that the matter will be enquired into and this House would be informed about it. Kindly look into this and please see that the enquiry report is furnished to this House.

ಅಧ್ಯಕ್ಷರು.—ಆಡಿಟ್ ರಿಪೋರ್ಟ್ ಇದೆ, ಅದನ್ನು ಪಾಯಿಂಟ್‌ಔಟ್ ಮಾಡಿದ್ದಾರೆ, ಅದನ್ನು ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡಿಲ್ಲ, ತಾವು ಗಮನಿಸಿ ವಿಚಾರಿಸಬಹುದು.

ಶ್ರೀ ಕೆ. ಗಂಗಾಧರ್.—ಕೂಡಲೇ ತರಿಸಿ ಅದರ ಬಗ್ಗೆ ವಿಚಾರ ನಡೆಸುತ್ತೇನೆ.

Horticultural Farm for Arasikere Taluk.

781 SRI D. B. GANGADHARAPPA (Arasikere)—Will the Minister of State for Horticulture and Prisions be pleased to state:—

(a) whether it has come to the notice of Government that there is no Horticultural Farm in Arasikere Taluk;

(b) is it not a fact that Government has started Horticultural Farm in every Taluk;

(c) whether Horticulture Department is working at Arasikere Taluk ?

SRI K. YENKATAPPA—Minister for Horticulture and Prisons.

(a) Yes.

(b) No.

(c) Yes.

ಶ್ರೀ ಡಿ. ಬಿ. ಗಂಗಾಧರಪ್ಪ.—ಉತ್ತರದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಹಾರ್ಟಿಕಲ್ಚರ್ ಫಾರಂಅನ್ನು ಪ್ರಾರಂಭ ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದ್ದೀರಿ. ಎಲ್ಲಾ ತಾಲ್ಲೂಕುಗಳಲ್ಲಿ ಹಾರ್ಟಿಕಲ್ಚರ್ ಫಾರಮನ್ನು ಪ್ರಾರಂಭ ಮಾಡಬೇಕು ಎನ್ನುವುದು ಸರ್ಕಾರದ ನೀತಿಯಲ್ಲವೇ ?

† ಶ್ರೀ ಕೆ. ಯಂಕಟಪ್ಪ.—ಅದು ಸರ್ಕಾರದ ನೀತಿ ಇದೆ. ಆದರೆ ರಾಜ್ಯದಲ್ಲಿ ೧೨ ತಾಲ್ಲೂಕುಗಳನ್ನು ಬಿಟ್ಟು ಉಳಿದ ತಾಲ್ಲೂಕುಗಳಲ್ಲಿ ಮಾಡಿದ್ದೇವೆ. ೧೨ ತಾಲ್ಲೂಕುಗಳಲ್ಲಿ ಮಾಡುವುದಕ್ಕೆ ತಡವಾಗಲಿಕ್ಕೆ ಕಾರಣವೇನೆಂದರೆ, ನಮಗೆ ತೃಪ್ತಿಕರವಾದ ಭೂಮಿ ದೊರಕಲ್ಲ ಮತ್ತು ಭೂಮಿ ದೊರಕಿದರೂ ನೀರಿನ ಅವಶ್ಯಕತೆ ದೊರಕದೇ ಇರುವುದರಿಂದ ತಡವಾಗಿದೆ.

ಶ್ರೀ ಡಿ. ಬಿ. ಗಂಗಾಧರಪ್ಪ.—ಹಾರ್ಟಿಕಲ್ಚರ್ ಫಾರಂ ಮಾಡುವುದಕ್ಕೆ ಏನು ತೊಂದರೆ ಯಾಗಿದೆ?

ಶ್ರೀ ಕೆ. ಯಂಕಟಪ್ಪ.—ಈಗ ಹೇಳಿದ್ದೇನೆ, ನೀರಿನ ಅವಶ್ಯಕತೆ ಮತ್ತು ಗುಣಮಟ್ಟದ ಭೂಮಿ ದೊರೆಯದೆ. ಇರುವುದೇ ಕಾರಣ.

ಶ್ರೀ ಪಿ. ಎ. ಮತ್ತಿಕಟ್ಟೆ.—ಸನ್ಮಾನ್ಯ ಅಧ್ಯಕ್ಷರೆ, ಈ ೧೨ ತಾಲ್ಲೂಕುಗಳಲ್ಲಿ ಒಳ್ಳೆಯ ಭೂಮಿ, ನೀರು ದೊರಕುವಂತೆ ವ್ಯವಸ್ಥೆ ಮಾಡಿಕೊಟ್ಟರೆ ಸರ್ಕಾರ ತೀಪ್ರವತಿಯಿಂದ ಹಾರ್ಟಿಕಲ್ಚರ್ ಫಾರಮನ್ನು ಪ್ರಾರಂಭಿಸುತ್ತದೆಯೇ ?

ಶ್ರೀ ಕೆ. ಯಂಕಟಪ್ಪ.—ಅಧ್ಯಕ್ಷರೆ, ಒಳ್ಳೆಯ ಭೂಮಿ ಗುಣಮಟ್ಟ, ನೀರಿನ ಮಟ್ಟ ದೊರೆಕಿಸಿಕೊಟ್ಟರೆ ಖಂಡಿತವಾಗಿ ನಾವು ಮಾಡುತ್ತೇವೆ.

ಶ್ರೀ ವಿ. ಎಲ್. ಶಿವಪ.—ಪ್ರಶ್ನೆಯಲ್ಲಿ, ''ಸರ್ಕಾರದವರು ತೋಟಗಾರಿಕೆ ಕೃಷಿ ಕ್ಷೇತ್ರಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಾರಂಭಿಸಿರುವುದು ನಿಜವಲ್ಲವೆ,'' ಎಂದು ಕೇಳಿದ್ದಕ್ಕೆ ಉತ್ತರದಲ್ಲಿ

''ಇಲ್ಲ'' ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳು, ಪ್ರತಿಯೊಂದು ತಾಲ್ಲೂಕಿನಲ್ಲೂ ತೋಟಗಾರಿಕೆ, ಹಾರ್ಟಿಕಲ್ಚರ್ ಪಾರಮಂನ್ನು ಮಾಡಬೇಕು ಎಂದು ಹೇಳಿದರು. ಆದುದರಿಂದ ಇದು ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ ಅಥವಾ ಈಗ ಅವರು ಹೇಳಿದ್ದು ಸರಿಯೋ, ಪ್ರಿಂಟಾಗಿರುವುದು ಸರಿಯೋ ?

ಶ್ರೀ ಕೆ. ಯಂಕಟಪ್ಪ. —ಪ್ರಶ್ನೆಯಲ್ಲಿ ಸರ್ಕಾರದವರು ತೋಟಗಾರಿಕೆ ಕೃಷಿ ಕ್ಷೇತ್ರಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಾರಂಭಿಸಿರುವುದು ನಿಜವಲ್ಲವೇ ಎಂದು ಕೇಳಿದ್ದಾರೆ. ಆದಕ್ಕೆ ಇಲ್ಲ ಎಂದು ಹೇಳಿದ್ದೇನೆ. ಇಲ್ಲ ಅಂದರೆ ೧೨ ತಾಲ್ಲೂಕುಗಳು ಎಂದು ಹೇಳಿದ್ದೇನೆ.

SRI V. L. SHIVAPPA.—The intention of the Government is to see that every taluk get a shorticulture farm.....

ಅಧ್ಯಕ್ಷರು.—೧೨ ತಾಲ್ಲೂಕುಗಳನ್ನು ಬಿಟ್ಟಿದೆ ಎಂದು ಹೇಳಿದ್ದಾರೆ, ಎಲಾ ತಾಲ್ಲೂಕುಗಳಲ್ಲಿ ಮಾಡುವುದು ಸರ್ಕಾರದ ನೀತಿ. ೧೨ ತಾಲ್ಲೂಕುಗಳಲ್ಲಿ ಸರಿಯಾದ ಭೂಮಿ, ನೀರು ಒದಗಿದರೆ ಅಲ್ಲೂ ಮಾಡುತ್ತೇವೆ ಎಂದು ಹೇಳಿದರು.

SRI V. L. SHIVAPPA.—Whether it is a printing mistake ?

ಅಧ್ಯಕ್ಷರು.—ಹನ್ನೆರಡೂ ಮುಕ್ಕಾಲು ಗಂಟೆಯಲ್ಲಿ Government has changed this policy.

SRI V. L. SHIVPAPA.—But what is the reply given here ?

ಅಧ್ಯಕ್ಷರು.—ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. ೧೭೫ ತಾಲ್ಲೂಕುಗಳಲ್ಲಿ ಹಾರ್ಟಿಕಲ್ಚರ್ ಫಾರಮಂನ್ನು ಪ್ರಾರಂಭ ಮಾಡತಕ್ಕಂಥ ಒಂದು ಪಾಲಿಸಿ ವಿಷಯವನ್ನು ಒಪ್ಪಿಕೊಂಡಿದ್ದಾರೆ. ಪ್ರಿಂಟಿಂಗ್ ಪ್ರಶ್ನೆ ಏಕೆ ?

ಶ್ರೀ ಎಂ. ಎನ್. ಮಾಳಿ.—ಒಳ್ಳೆಯ ಜಮೀನನ್ನು ಮತ್ತು ಒಳ್ಳೆಯ ನೀರು ಇರತಕ್ಕ ಜಮೀನುಗಳನ್ನು ಬ್ಯಾಡ್ಗಿ ತಾಲ್ಲೂಕಿನಲ್ಲಿ ಕೊಟ್ಟರೆ ತೋಟಗಾರಿಕೆ ಫಾರಂ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ?

ಶ್ರೀ ಕೆ. ಯಂಕಟಪ್ಪ.—ಒಂದೊಂದು ತಾಲ್ಲೂಕಿನಲ್ಲಿ ನರ್ಸರಿ ಫಾರಂ ಇರುತ್ತದೆ. ಹೆಚ್ಚು ಮಾಡಿರಿ ಅಂದರೆ ನಮ್ಮಗೆ ಇರತಕ್ಕಂಥ ಆರ್ಥಿಕ ವ್ಯವಸ್ಥೆಯಲ್ಲಿ ಹಲವಾರು ಕಡೆಗಳಲ್ಲಿ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಡಿ. ಬಿ. ಗಂಗಾಧರಪ್ಪ.—ಆರಸೀಕೆರೆ ತಾಲ್ಲೂಕಿನಲ್ಲಿ ಈಗಾಗಲೇ ಜಾಗವನ್ನು ನೋಡಿದಿರಿ. ಅಮೃತಮಹಲ್ ಕಾವಲ್‌ನಲ್ಲಿ ಒಂದು ಸಾವಿರ ಎಕರೆ ಇದೆ. ಅಲ್ಲಿ ಒಳ್ಳೆಯ ಜಮೀನು ಇದೆ, ನೀರು ಇದೆ ಆದುದರಿಂದ ಅಮೃತಮಹಲ್ ಕಾವಲ್ ಜಮೀನಿನಲ್ಲಿ ಯಾವಾಗ ಹಾರ್ಟಿಕಲ್ಚರ್ ಫಾರಮಂನ್ನು ಸ್ಥಾಪನೆ ಮಾಡುತ್ತೀರಿ.

ಶ್ರೀ ಕೆ. ಯಂಕಟಪ್ಪ.— ಮಾನ್ಯ ಸದಸ್ಯರು ಹೇಳಿದಹಾಗೆ ನಾವು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟನ್ನು ಕೇಳಿದ್ದೇವೆ, ಅವರು ಬಿಟ್ಟುಕೊಟ್ಟ ತಕ್ಷಣ ಮಾಡಲಿಕ್ಕೆ ವ್ಯವಸ್ಥೆ ಮಾಡುತ್ತೇವೆ. ಅರಸೀಕೆರೆ ಪುರಸಭೆಯವರು ನಗರದ ಪಕ್ಕದಲ್ಲಿ ಒಂದಿಷ್ಟು ಜಾಗವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅಲ್ಲಿ ನರ್ಸರಿ ಮಾಡಬೇಕು ಎಂದು ಇದ್ದೇವೆ. ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನವರು ಒಪ್ಪಿಗೆ ಕೊಟ್ಟರೆ ನಾವು ಫಾರಂ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಎಸ್. ನಾಡೋಣಿ —ಉಳಿದ ೧೨ ತಾಲ್ಲೂಕುಗಳು ಯಾವುವು ಎಂದು ಹೇಳುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಆರಸೀಕೆರೆ, ಆನೇಕಲ್, ಬೆಂಗಳೂರು ನಾರ್ತ್, ಆಳಂದ, ಹೊಳಲಕೆರೆ, ಜಾವರ್ಗಿ, ಮುದ್ದೇ ಬಿಹಾಳ್, ನವಲ್‌ಗುಂದ್, ಹುನಗುಂದ್, ಸೂಪ, ಸವಣೂರು.

ಶ್ರೀ ಡಿ. ಬಿ. ಗಂಗಾಧರಪ್ಪ.—ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಾ ಇದೆ ಎಂದು ಹೇಳಿದಿರಿ. ಆರಸೀಕೆರೆ ತಾಲ್ಲೂಕಿನಲ್ಲಿ ತೆಂಗಿನ ಮರಗಳಿಗೆ ಎಲ್ಲೋ ಡಿಸೀಸ್ ಬಂದಿದೆ, ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ ಯಂಕಟಪ್ಪ.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ೩೦ ನೇ ತಾರೀಖು ಶಾಸಕರ ಸಭೆಯನ್ನು ಕರೆದಿದ್ದೇವೆ.

ಶ್ರೀ ವಿ. ಮಸಿಯಪ್ಪ.—ತಾವು ಸ್ಥಾಪನೆ ಮಾಡಿರತಕ್ಕ ಹಾರ್ಟಿಕಲ್ಚರ್ ಫಾರಂಗಳಲ್ಲಿ ರೈತರಿಗೆ ಆವಶ್ಯಕವಾಗಿ ಬೇಕಾಗಿರತಕ್ಕಂಥ ಗಿಡಗಳನ್ನು ಒದಗಿಸತಕ್ಕಂಥಾದ್ದು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಾ ಇಲ್ಲ ಎನ್ನುವುದು ಅನುಭವಕ್ಕೆ ಬಂದಿದೆ. ಆದುದರಿಂದ ತೆಂಗು, ಹಣ್ಣಿನ ಗಿಡಗಳು, ಪಪಾಯ್ ವಗೈರೆ ಸಸಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಯಂಕಟಪ್ಪ. – ಬೇಡಿಕೆ ಸಾಕಷ್ಟು ಇದೆ. ಆದರೆಲ್ಲಿ ನಾವು ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಖಾಸಗಿ ನರ್ಸರಿ ಫಾರಂಗಳನ್ನು ಮಾಡುತ್ತಾ ಇದ್ದಾರೆ. ಆರ್ಥಿಕ ದೃಷ್ಟಿ ಕೋನಗಳನ್ನು ಇಟ್ಟುಕೊಂಡು ರೈತರಿಗೆ ಅನುಕೂಲಕರವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಎ. ಮಿತ್ರಿಕಟ್ಟಿ —ಮಾನ್ಯ ಮಂತ್ರಿಗಳು ಓದಿದ ೧೨ ತಾಲ್ಲೂಕುಗಳಲ್ಲಿ ನನ್ನ ತಾಲ್ಲೂಕು ಇಲ್ಲಿ. ಆಲ್ಲಿ ಚಿಕ್ಕದೊಂದು ಜಾಗದಲ್ಲಿ ೨೦ ಗುಂಚೆ ನರ್ಸರಿ ಇದೆ. ಅದಕ್ಕೂ ಫಾರಂ ಅನ್ನುತಾರೋ ಹೇಗೋ ಸಂಶಯ ಬರುತ್ತದೆ ನರ್ಸರಿ ಬೇರೆ ಹಾರ್ಟಿಕಲ್ಚರ್ ಫಾರಂ ಬೇರೆ ಎಂಬುದನ್ನು ಸನ್ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಫಾರಂ ದೊಡ್ಡದಾಗಿರಬೇಕು, ಜನ ಬಂದು ನೋಡಲಿಕ್ಕೆ ಅನುಕೂಲತೆ ಇರಬೇಕು, ಜನತೆಗೆ ಹೆಚ್ಚಿನ ಮಾಹಿತಿ ಒದಗಿಸತಕ್ಕಥಾದ್ದು. ನನ್ನ ದೃಷ್ಟಿಯಲ್ಲಿ ವಿಚಾರ ಮಾಡಿದರೆ ಇದು ೧೨ ಅಲ್ಲ ಇನ್ನೂ ಹೆಚ್ಚು ಇರಬಹುದು ಎಂದು ಸಂಶಯ ಬರುತ್ತದೆ. ಇದಕ್ಕ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಕೆ. ಯಂಕಟಪ್ಪ.—ಈಗ ಮಾನ್ಯ ಸದಸ್ಯರು ಗಮನಕ್ಕೆ ತಂದುದನ್ನು ಇಟ್ಟು ನಾನು ವಿಚಾರ ಮಾಡಿಸುತ್ತೇನೆ.

Building for Girls High School in Chittapur.

862 SRI S. F. BHAIRY (Shahabad) and SRI B. V. KAKKILAYA (Vittal)—Will the Minister of State for Primary and Secondary Education be pleased to state:—

(a) whether the Government is aware that the Chittapur Government Girls High School is being run on shift basis in the Higher Primary School Building;

(b) the student strength of the Higher Primary School and the Girls High School respectively;

(c) whether the Government intend to consider sanctioning construction of a building for the Girls High School in the current year (1980-81)?

SMT. NAGAMMA C. KESHAVAMURTHY—Minister of State for Primary and Secondary Education.

(a) Yes.

(b) The strength of Model Primary School is : boy 501 + girls 95 = 596. The strength of Government Girls High School is 88.

(c) The name of Government Girls High School, Chittapur is included in the list of Schools for which buildings are to be put up during the current year.